ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ನೀರಾವರಿಗೆ ಒಳಪಡುವ ಅಂದಾಜು ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)

1.	ಹೇಮಾವತಿ ಯೋಜನೆ	1,28,191
2.	ಯಗಚಿ ಯೋಜನೆ	21,450
3.	ವಾಟೆಹೊಳೆ ಯೋಜನೆ	7,487
4.	ಕಾಮಸಮುದ್ರ ಏತ ನೀರಾವರಿ	3,916
5.	ಹುಚ್ಚನಕೊಪ್ಪಲು ಏತ ನೀರಾವರಿ	3,360
6.	ಕಾಚೇನಹಳ್ಳಿ ಏತ ನೀರಾವರಿ	3,480
	ಒಟ್ಟು	**1,67,884**

ಆ)

1.	ಹೇಮಾವತಿ ಯೋಜನೆ	3152.00 ಲಕ್ಷಗಳು
2.	ಯಗಚಿ ಯೋಜನೆ	2346.58 ಲಕ್ಷಗಳು
3.	ವಾಟೆಹೊಳೆ ಯೋಜನೆ	255.08 ಲಕ್ಷಗಳು
	ಒಟ್ಟು	**5753.66 ಲಕ್ಷಗಳು**

ಇ) ವಿವರಗಳು ಈ ಕೆಳಕಂಡಂತಿದೆ

1.	ಹೇಮಾವತಿ ಯೋಜನೆ	517.03
2.	ಯಗಚಿ ಯೋಜನೆ	261.52
3.	ವಾಟೆಹೊಳೆ ಯೋಜನೆ	1.12
	ಒಟ್ಟು	**779.67 ಲಕ್ಷಗಳು**

ಬೆಂಗಳೂರು ಮಹಾನಗರ ಪಾಲಿಕೆಯ ರಸ್ತೆಗಳ ಕಾಮಗಾರಿ

5074 - ಶ್ರೀ ಎ. ಮಂಜು (ಅರಕಲಗೂಡು) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬಾಂಡ್ ಯೋಜನೆ ಕಾಮಗಾರಿ ಹೊರತುಪಡಿಸಿ ಉಳಿದೆಲ್ಲ ಕಾಮಗಾರಿಗಳು ಕಳೆದ ಒಂದು ವರ್ಷದಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಆ) ಬೆಂಗಳೂರು ಮಹಾನಗರ ಪಾಲಿಕೆ ಸಾರ್ವಜನಿಕರಿಂದ ತೆರಿಗೆ ವಸೂಲು ಮಾಡುತ್ತಿದ್ದರೂ ಈ ಕೆಲಸ ಕೈಗೊಳ್ಳದಿರಲು ಕಾರಣಗಳೇನು?

ಇ) ಈ ಕೆಲಸಗಳನ್ನು ಸರ್ಕಾರ ಯಾವಾಗ ಕೈಗೊಳ್ಳುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ ಒಂದು ವರ್ಷದಲ್ಲಿ ಬಾಂಡ್ ಯೋಜನೆಯ ಕಾಮಗಾರಿಗಳಲ್ಲದೆ ಬೇರೆ ಕಾಮಗಾರಿಗಳಾದ ಮೋಟಾರೇಬಲ್ ರಸ್ತೆ ಅಭಿವೃದ್ಧಿಯ ಕೆಲಸ, ವಾರ್ಡ್ ರಸ್ತೆಗಳಿಗೆ ಮೆಟಲಿಂಗ್ ಮತ್ತು ಡಾಂಬರೀಕರಣ ಹೊಸ ವಾರ್ಡ್‌ಗಳಲ್ಲಿ ಮತ್ತು ಭಾಗಶಃ ಹೊಸ ವಾರ್ಡ್‌ಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿಯ ಕೆಲಸಗಳು ಉದ್ಯಾನವನಗಳು, ರಿಚ್‌ಮಂಡ್ ಮೇಲು ಸೇತುವೆ, ಮೇಖ್ರಿ ವೃತ್ತದ ಗ್ರೇಡ್ ಸಪರೇಟರ್ ಮತ್ತು ಸಂಗಂ ಸಬ್‌ವೇ ಮುಂತಾದ ಕಾಮಗಾರಿಗಳನ್ನು ಸಹ ತೆಗೆದುಕೊಳ್ಳಲಾಗಿದೆ. ಇದಲ್ಲದೆ ಆಗಸ್ಟ್ 2000ರ ಮಾಹೆಯಲ್ಲಿ ಅತಿವೃಷ್ಟಿಯ ಮಳೆಯಿಂದ ಹಾನಿಗೀಡಾದ ಕಾಮಗಾರಿಗಳ ಕೆಲಸಗಳನ್ನು ಕೂಡ ಸಮರೋಪಾದಿಯಲ್ಲಿ ತೆಗೆದುಕೊಂಡಿದೆ. ಬಾಂಡ್ ಅಡಿಯಲ್ಲಿ ಕೈಗೊಂಡಿರುವ ರಸ್ತೆ ನಿರ್ಮಾಣ ಕಾಮಗಾರಿಗಳ ಅಂದಾಜನ್ನು ಹೊರತುಪಡಿಸಿ, ಸುಮಾರು 200 ಕೋಟಿ ರೂ.ಗಳ ಅಂದಾಜಿನಲ್ಲಿ ರಸ್ತೆ ಕೆಲಸ ಕೈಗೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ಕಸ ವಿಲೇವಾರಿ ಮಾಡಲು ಮುಕ್ತ ಟೆಂಡರ್ ಕರೆಯುವುದು

5075 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕಸ ವಿಲೇವಾರಿ ಮಾಡಲು ಗುತ್ತಿಗೆಗೆ ಪೂರ್ವಾರ್ಹತೆ ಅನ್ವಯ ಅಂತಿಮಗೊಳಿಸಲಾಗಿದ್ದ ಗುತ್ತಿಗೆದಾರರ ಪಟ್ಟಿಯನ್ನು ರದ್ದುಪಡಿಸಲಾಗಿದೆಯೇ? ಹಾಗಿದ್ದಲ್ಲಿ ರದ್ದು ಮಾಡಲು ಕಾರಣಗಳೇನು?

ಆ) ಪೂರ್ವಾರ್ಹತೆ ಅನ್ವಯ ಎಷ್ಟು ಗುತ್ತಿಗೆದಾರರ ಪಟ್ಟಿಯನ್ನು ಸಿದ್ಧಪಡಿಸಲಾಗಿತ್ತು?

ಇ) ಈಗ ಮುಕ್ತ ಟೆಂಡರ್ ಕರೆಯಲಾಗಿದೆಯೇ? ಒಟ್ಟು ಎಷ್ಟು ಟೆಂಡರ್ ಅರ್ಜಿಗಳು ಬಂದಿವೆ?

ಈ) ಯಾರಿಗೆ ಟೆಂಡರ್ ನೀಡಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು. ಟೆಂಡರ್ ಅರ್ಜಿಗಳನ್ನು ಪರಿಶೀಲಿಸಲಾಗಿ, ಗುತ್ತಿಗೆದಾರರು ನಮೂದಿಸಿರುವ ದರದಲ್ಲಿ ಹಾಗೂ ಇನ್ನಿತರೆ ದಾಖಲಾತಿಗಳು ಮುಕ್ತವಾಗಿರದೇ ಈ ಸ್ಪರ್ಧೆಯಲ್ಲಿ ಹೆಚ್ಚಾಗಿ ಒಬ್ಬನೇ ಗುತ್ತಿಗೆದಾರನು ಸ್ವಚ್ಛತಾ ಪದ್ಧತಿಯಲ್ಲಿ ಹೆಚ್ಚು ಪ್ಯಾಕೇಜ್‌ಗಳಿಗೆ ಹೆಚ್ಚಿನ ದರಗಳನ್ನು ಸೂಚಿಸಿದ್ದುದರಿಂದ, ನ್ಯಾಯುತವಾಗಿ ತೀರ್ಮಾನ ಕೈಗೊಳ್ಳಲು ಕಷ್ಟಕರವೆನಿಸಿತು ಹಾಗೂ ಗುತ್ತಿಗೆದಾರರು ಸಲ್ಲಿಸಿದ್ದ ವರಮಾನ ತೆರಿಗೆ ಜೆರಾಕ್ಸ್ ಪ್ರತಿಗಳನ್ನು ಪರಿಶೀಲಿಸಲಾಗಿ, ಇದರಲ್ಲಿ ಇನ್ನೂ ಹಲವಾರು ಗುತ್ತಿಗೆದಾರರನ್ನು